ಅಸಂಘಟಿತ ಕಾರ್ಮಿಕರ ಕುರಿತು

2293 - ಶ್ರೀ ಕೆ. ಪ್ರತಾಪ ಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಅಸಂಘಟಿತ ಕಾರ್ಮಿಕರಿಗೆ ಉದ್ಯೋಗದಲ್ಲಿ ಭದ್ರತೆ ಕಲ್ಪಿಸುವ ಯೋಜನೆ ಸರ್ಕಾರದ ಮುಂದಿದೆಯೇ? ಹಾಗಿದ್ದಲ್ಲಿ ವಿವರ ನೀಡುವುದು.*

ಆ) *ಖಾಸಗಿ ಬಸ್‌ಗಳ ಚಾಲಕ ಮತ್ತು ನಿರ್ವಾಹಕರನ್ನು ಉದ್ಯೋಗ ಭದ್ರತೆಯ ಅಡಿಯಲ್ಲಿ ತರಲು ಸರ್ಕಾರದ ಯೋಜನೆ ರೂಪಿಸಲಾಗಿದೆಯೇ?*

ಇ) *ಹಾಗಿಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು?*

ಶ್ರೀ ಬಿ. ಸತ್ಯನಾರಾಯಣ (ಕಾರ್ಮಿಕ ರಾಜ್ಯ ಸಚಿವರು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಮೀನುಗಾರಿಕೆಗೆ ಸೀಮೆ ಎಣ್ಣೆ ಮತ್ತು ಡೀಸೆಲ್ ಸಬ್ಸಿಡಿ

2294 - ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕೇರಳ ರಾಜ್ಯದಲ್ಲಿ ಮೀನುಗಾರಿಕೆಗೆ ಬಳಸುವ ಇಂಜಿನ್‌ನ ಶಕ್ತಿಯ ಮೇಲೆ 350 ರಿಂದ 400 ಲೀಟರ್ ಸೀಮೆಎಣ್ಣೆ ಮತ್ತು ಡೀಸೆಲ್ ಸಬ್ಸಿಡಿ ದರದಲ್ಲಿ ದೊರೆಯುತ್ತಿರುವುದು ನಿಜವೇ?*

ಆ) *ರಾಜ್ಯ ಸರ್ಕಾರ ತನ್ನ ತಾತ್ವಿಕ ಸಹಮತ ವ್ಯಕ್ತಪಡಿಸಿದ್ದರೂ ಕೇರಳದ ಮಾದರಿಯಲ್ಲಿ ಸಬ್ಸಿಡಿ ದರದಲ್ಲಿ ಸೀಮೆಎಣ್ಣೆ ಮತ್ತು ಡೀಸೆಲ್ ಪ್ರಮಾಣವನ್ನು ವಿತರಿಸದಿರಲು ಕಾರಣವೇನು?*

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು) :

ಅ) ಹೌದು.

ಸೀಮೆಎಣ್ಣೆ : ಕೇರಳ ರಾಜ್ಯದಲ್ಲಿ 15 ಅಶ್ವಶಕ್ತಿ ಇಂಜಿನ್ ದೋಣಿಗಳಿಗೆ 350 ಲೀಟರ್ ಮತ್ತು 15 ಅಶ್ವ ಶಕ್ತಿ ಇಂಜಿನ್ ಮೇಲ್ಪಟ್ಟ ದೋಣಿಗಳಿಗೆ 400 ಲೀಟರ್‌ನಂತೆ ಸೀಮೆಎಣ್ಣೆ ನೀಡಲಾಗುತ್ತಿದೆ. ಸೀಮೆಎಣ್ಣೆಯನ್ನು ಸಾರ್ವಜನಿಕ ವಿತರಣಾ ವ್ಯವಸ್ಥೆ ದರದ ಪ್ರಕಾರ ಪ್ರತಿ ಲೀಟರ್‌ಗೆ ರೂ. 2.86 ಪೈಸೆಯಂತೆ ನೀಡಲಾಗುತ್ತಿದೆ.